# ಏನಾಯಿತೊ ಈ ಜನಕೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 131.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 297.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 65.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 123.
5. **Note:** Lyrics given without highlights are as per Ref. 1. The wordings in Ref. 2 are same as in Ref. 1. The wordings given separately in green highlights are as per Ref. 3. The wordings in Ref. 4 are same as in Ref. 3.
6. **Note:** Ankita is different in both the books. We have considered Ref. 3 as standard and taken that Ankita for listing.
7. **Note:** Singer has followed the lyrics given without highlights (as per Ref. 1).

ರಾಗ : ಬಿಲಹರಿ ತಾಳ : ಅಟ

ಏನಾಯಿತೊ ಈ ಜನಕೆ
ಮೌನವನು ಹಿಡಿದು ಮರೆತರು ಹರಿಯ ॥ ಪ ॥

ನಾಲಿಗೆ ಮುರಿದಿತೊ ನೆಗ್ಗಿನ ಕೊನೆ ಮುಳ್ಳು
ಬಾಲಕತನದಲಿ ಭೂತ ಹಿಡಿಯಿತೊ, ಕೆಳಗು
ಮೇಲಿನ ತುಟಿ ಎರಡು ಒಂದಾಯಿತೊ, ಅವರ
ಕಾಲಮೃತ್ಯುವು ಬಂದು ಕಂಗೆಡಿಸಿತೊ ॥ 1 ॥

ಘಟ ಸರ್ಪ ಕಚ್ಚಿ ವಿಷ ಘನವಾಗಿ ಏರಿತೊ
ಕಟಕರಿಸಿ ನಾಲಿಗೆ ಕಡಿದುಹೋಯಿತೊ
ಹಟದಲ್ಲಿ ಹರಿಯನ್ನು ನೆನೆಯದೆ ಇರುವಂಥ

ಕುಟಿಲ ಚಂಚಲ ಮನಸು ಕೂಡಿ ಬಾಧಿಸಿತೊ     ll 2 ll

ಹರಿಯೆಂದರಿವರ ಶಿರ ಹರಿದು ತಾ ಬೀಳುವುದೆ
ಹರಿನಾಮ ಹಣೆಯಲ್ಲಿ ಬರೆದಿಲ್ಲವೇ
ವರದ ಪುರಂದರ ವಿಠ್ಠಲರಾಯನ್ನ
ಸ್ಮರಿಸಿದರೆ ಸಿಡಿಲೆರಗಿ ಕೊಲ್ಲುವುದೇ     ll 3 ll

**Note:** Lyrics given below are as per Ref. 3 and Ref. 4 above. They are slightly different than that of the above. Hence, they are given separately.

ರಾಗ: ಪೂರ್ವಿ                    ತಾಳ: ಅಟ

ಏನಾಯಿತೀ ಜನಕೆ ಮೌನವದು ಕವಿದಂತೆ
ಮಾನುಷ್ಯರಾಗಿ ಮರೆತರು ಹರಿಯನು     ll ಪ ll

ನಾಲಗೆಗೆ ಮುರಿಯಿತೆ ನೆಗ್ಗಿಲ ಕೊನೆಮುಳ್ಳು
ಬಾಲತನದಲಿ ಭೂತ ಹೊಡೆಯಿತೆ - ಕೆಳಗು
ಮೇಲಿನ ತುಟಿ ಎರಡು ಒಂದಾಯಿತೇ -ಅವರ
ಕಾಲಮೃತ್ಯು ಬಂದು ಕಂಗೆಡಿಸಿತೆ ?     ll 1 ll

ಘಟಸರ್ಪ ಕಚ್ಚಿ ವಿಷ ಘನವಾಗಿ ಏರಿತೆ
ಕಟಗರಿಸಿ ನಾಲಗೆ ಕಡಿದು ಹೋಯಿತೆ ?
ಹಟ ಹಿಡಿದ ಹೊಲೆ ಮನಸು ಹರಿ ಎನ್ನಲಾರದೆ
ಕುಟಿಲ ಚಂಚಲ ಬುಧ್ಧಿ ಕಂಗೆಡಿಸಿತೆ ?     ll 2 ll

ಹರಿಯೆಂದರವರ ಶಿರ ಹರಿದು ಬೀಳುವುದೆ
ಪರಬ್ರಹ್ಮ ಪಣೆಯಲ್ಲಿ ಬರೆದಿಲ್ಲವೆ
ಸಿರಿದೇವಿಗೊಲಿದ ಶ್ರೀ ಪುರಂದರ ವಿಠಲನ
ಸ್ಮರಿಸಿದರೆ ಸಿಡಿಲೆರಗಿ ಸುಟ್ಟು ಕೊಲ್ಲುವುದೆ ?     ll 3 ll

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಜನರಲ್ಲಿ ಹರಿವಿಸ್ಮರಣೆಯೆಂಬ ಅಪರಾಧವಿರುವುದನ್ನು ಕಂಡು ದಾಸರು ಮರುಕಗೊಂಡು ರಚಿಸಿದ ಕೃತಿ. ವ್ಯಾಸರಾಯಸ್ವಾಮಿಗಳು 'ಆದ್ಯಪರಾಧ ಮಿಥ್ಯಾಜ್ಞಾನ, ದ್ವಿತೀಯ ಹರಿಯ ವಿಸ್ಮರಣೆ' ಎಂದು ಹೇಳಿರುವುದನ್ನು ನೆನಪಿಗೆ ತಂದುಕೊಳ್ಳಬೇಕು. ಮಿಥ್ಯಾಜ್ಞಾನವನ್ನೇ ಇಲ್ಲಿ "ಬಾಲಕತನದ ಭೂತ", "ಘಟಸರ್ಪ", "ಕಾಲಮೃತ್ಯು" ಎಂದು ಬಣ್ಣಿಸಿದ್ದಾರೆ. ಜೀವನು ತಾನೇ ಸ್ವತಂತ್ರ. ಕರ್ತೃ ಭೋಕ್ತೃ ಎಂದು ಬಗೆಯುವುದೇ ಮಿಥ್ಯಾಜ್ಞಾನದ ತಾತ್ಪರ್ಯ. ಇದರಿಂದ ದಿಟವಾಗಿ ಸ್ವತಂತ್ರನೂ, ಕರ್ತೃ, ತಾರಕ, ಪ್ರೇರಕ, ನಿಯಾಮಕ, ಸ್ವಾಮಿಯೂ ಬಿಂಬರೂಪನೂ ಆದ ಪರಮಾತ್ಮನನ್ನು ಮರೆತು, ತೃತೀಯ ಅಪರಾಧವೆನಿಸಿದ 'ನಿಷಿದ್ಧಾವಿಹಿತಾಚರಣೆ'ಯಲ್ಲಿ ತೊಡಗುತ್ತಾನೆ. ಹರಿಯ ವಿಸ್ಮರಣೆಯಿಂದ ಒದಗಿದ ಫಲ ಇದು; ಇದನ್ನು ಇಲ್ಲಿ ದಾಸರು "ಹಟ"ವೆಂದು ಕರೆದಿದ್ದಾರೆ.

**ಕವಿ** = ಮುತ್ತಿಗೆ ಹಾಕು

**ಬಾಲತನದಲಿ ...... ಹೊಡೆಯಿತೆ** : - ಚಿಕ್ಕತನದಲ್ಲಿಯೇ ಹೊಟ್ಟೆಯೊಳಗಿನ ಬೇನೆ (ಬಾಲಗ್ರಹ) ಬಂದು ಬಿದ್ದಿಯನ್ನು ಕೆಡಿಸಿತೆ ?

**ಅಕಾಲ** = ಕಾಲ ತಪ್ಪಿ ಬರುವ

**ಘಟ ಸರ್ಪ** = ಹೆಡೆಯುಳ್ಳ ಹಾವು, ನಾಗರ ಹಾವು

**ಕಟಗರಿಸು** = ಹಲ್ಲಿಗೆ ಹಲ್ಲು ಕೊಡು

**Classification:** Keerthane
**Ankita:** sri purandara vittala
**Location:** NA
**Category:** Jeevana Darshana, Aartha Bhava.
**Sub-Category:** jana, Krishna, nalige, mullu, uraga, visha, holeya, buddi, parabrahma, devi, smarane,
**Pravachana:** NA
**Explanation:** NA